# CHAPTER -11

**ಈ ಕೆಳಗಿನ ಪ್ರತಿ ಪ್ರಶ್ನೆಗೆ ನೀಡಿದ ನಾಲ್ಕು ಆಯ್ಕೆಗಳಲ್ಲಿ ಸರಿಯಾದ ಉತ್ತರವನ್ನು ಆಯ್ಕೆ ಮಾಡಿರಿ.**

1. ಕಾರ್ಟಿಸಿಯನ್ ನಿಯಮದಂತೆ ಈ ಕೆಳಗಿನ ಯಾವ ಹೇಳಿಕೆ ***ತಪ್ಪಾಗಿದೆ.***

   A) ಪ್ರಧಾನಾಕ್ಷಕ್ಕೆ ಲಂಬವಾಗಿ ಮೇಲಿನ ಕಡೆಗೆ ಅಳೆಯಲಾಗುವ ದೂರಗಳನ್ನು ಧನಾತ್ಮಕವಾಗಿ ತೆಗೆದುಕೊಳ್ಳಬೇಕು.


   B) ಪ್ರಧಾನಾಕ್ಷಕ್ಕೆ ಲಂಬವಾಗಿ ಕೆಳಗಿನ ಕಡೆಗೆ ಅಳೆಯಲಾಗುವ ದೂರಗಳನ್ನು ಋಣಾತ್ಮಕವಾಗಿ ತೆಗೆದುಕೊಳ್ಳಬೇಕು.

   C) ಮೂಲ ಬಿಂದುವಿನ ಬಲಭಾಗದಲ್ಲಿನ ಎಲ್ಲಾ ಅಳತೆಗಳನ್ನು ಧನಾತ್ಮಕವಾಗಿ ತೆಗೆದುಕೊಳ್ಳಬೇಕು.

   D) ಪ್ರಧಾನ ಅಕ್ಷಕ್ಕೆ ಸಮಾಂತರವಾಗಿರುವ ಎಲ್ಲಾ ದೂರಗಳನ್ನು ಪ್ರಧಾನ ಸಂಗಮದಿಂದ ತೆಗೆದುಕೊಳ್ಳಬೇಕು.

2. ನೀರು, ಆಲ್ಕೋಹಾಲ್, ಸೀಮೆ ಎಣ್ಣೆ & ಮಂಜುಗಡ್ಡೆಗಳ ವಕ್ರೀಭವನ ಸೂಚ್ಯಂಕಗಳು ಕ್ರಮವಾಗಿ 1.33, 1.36, 1.44 & 1.31 ಆದರೆ ಈ ಕೆಳಗಿನ ಚಿತ್ರದಲ್ಲಿ ತೋರಿಸಲಾದ AB ಕಿರಣವು ಇದಾಗಿದೆ.

   A) ನೀರು B) ಆಲ್ಕೋಹಾಲ್ C) ಸೀಮೆ ಎಣ್ಣೆ D) ಮಂಜುಗಡ್ಡೆ




3. ಮಸೂರದ ದೃಕ್ ಕೇಂದ್ರದ ಮೂಲಕ ಹಾದು ಹೋಗುವ ಬೆಳಕಿನ ಕಿರಣವು

   A) ಪ್ರಧಾನಾಕ್ಷಕ್ಕೆ ಸಮಾಂತರವಾಗಿ ನಿರ್ಗಮಿಸುತ್ತದೆ B) ವಿಚಲನೆ ಹೊಂದುವುದಿಲ್ಲ

   C) ಪ್ರಧಾನ ಸಂಗಮದ ಮೂಲಕ ನಿರ್ಗಮಿಸುತ್ತದೆ D) ಮಿಥ್ಯ ಪ್ರತಿಬಿಂಬವಾಗುತ್ತದೆ.

4. ಪೀನ ಮಸೂರದಲ್ಲಿ ವಸ್ತು & ಪ್ರತಿಬಿಂಬಗಳ ಗಾತ್ರ ಕ್ರಮವಾಗಿ 10cm ಆದರೆ ವಸ್ತುವನ್ನು ಇಲ್ಲಿ ಇಡಲಾಗಿದೆ.

   A) 2f ನಲ್ಲಿ B) f ನಲ್ಲಿ C) 2f ಗಿಂತ ಆಚೆ D) ಅನಂತ ದೂರದಲ್ಲಿ

5. ಒಂದು ಮಸೂರದ ವರ್ಧನೆಯನ್ನು m=+2 ಎಂದು ಬರೆದರೆ ಅದರ ಅರ್ಥ ವಸ್ತು ಪ್ರತಿಬಿಂಬಕ್ಕಿಂತ

   A) ದೊಡ್ಡದು B) ಚಿಕ್ಕದು C) ಸಮನ ಗಾತ್ರ D) ಎಲ್ಲವೂ

6. ಮಸೂರ ಸಾಮರ್ಥ್ಯದ ಅಂತರಾಷ್ಟ್ರೀಯ ಏಕಮಾನ ಎಂದರೆ

   A) ಓಮ್ B) ಲೀಟರ್ C) ಡಯಾಪ್ಟರ್ D) ಕೂಲಮ್

7. ಒಂದು ಮಸೂರದ ಸಂಗಮದೂರವು ಸಾಮರ್ಥ್ಯಕ್ಕೆ ಸಮವಾಗಬೇಕಾದರೆ ಸಂಗಮದೂರದ ಬೆಲೆ

   A) 1 B) +2 C) 2.5 D) +1.5

8. ಈ ಮಸೂರವು ಯಾವಾಗಲೂ ಮಿಥ್ಯ, ನೇರ ಪ್ರತಿಬಿಂಬವನ್ನು ಉಂಟು ಮಾಡುತ್ತದೆ.

   A) ನಿಮ್ನ B) ಪೀನ C) ಎರಡೂ D) ಯಾವುದೂ ಅಲ್ಲ

9. ಮಸೂರದ ದೃಕ್ ಕೇಂದ್ರ ಹಾಗೂ ಪ್ರಧಾನ ಸಂಗಮದ ನಡುವಿನ ದೂರ

   A) ಸಂಗಮ ಬಿಂದು B) ಸಂಗಮದೂರ C) ದ್ಯುತಿರಂಧ್ರ D) ಪ್ರಧಾನಾಕ್ಷ

10. ಒಂದು ಮಸೂರದ ಸಾಮರ್ಥ್ಯದ ಮೌಲ್ಯವು ಋಣಾತ್ಮಕವಾಗಿದ್ದರೆ ಅದು

    A) ನಿಮ್ನ B) ಪೀನ C) ಎರಡೂ D) ಯಾವುದೂ ಅಲ್ಲ

LIVEWORKSHEETS